ಮೂಲ ದಾವಾ ಸಂಖ್ಯೆ 20/2016

ಪಿ ಡಬ್ಲ್ಯೂ-3

(ದಿನಾಂಕ 05.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ B.K.M. ವಕೀಲರಿಂದಃ-

ಜಹೀರಾಬೀ ರವರ ಜಾಗದಲ್ಲಿ ಬ್ರಿಕ್ ತಯಾರಿಕಾ ಘಟಕ ಇದೆ ಅಂತಾ ಹೇಳಿದ್ದು ಅದಕ್ಕೆ ಸಂಬಂಧಿಸಿದ ಲೈಸೆನ್ಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲಾ. ಲೈಸೆನ್ಸ ಪಡೆದಿರುವುದಿಲ್ಲಾ. ದಾವಾ ಆಸ್ತಿಯಲ್ಲಿ ಕೆಲವರಿಗೆ ಕ್ರಯ ಕರಾರು ಮೂಲಕ ಮಾರಾಟ ಮಾಡಿದ್ದು ಅಂತಾ ತಿಳಿಸಿದ್ದು ಎಷ್ಟು ಮಾರಾಟ ಮಾಡಿರುತ್ತಾರೆ ಅಂತಾ ತಿಳಿಸಿಲ್ಲಾ ಎಂದರೆ ಸರಿ. ನಾನು ಸಿಮೆಂಟ್ ಅಂಗಡಿಯನ್ನು ನಡೆಸಲು ಲೈಸೆನ್ಸ ಪಡೆದಿರುವುದಿಲ್ಲಾ. ನಾನು ಸಿಮೆಂಟ್ ಅಗಂಡಿ ಬ್ರಿಕ್ ತಯಾರಿಕಾ ಘಟಕಾ ಇಲ್ಲಾ ಎಂದರೆ ಈಗ ತೆಗೆದಿರುತ್ತಾರೆ. ದಾವಾ ಆಸ್ತಿಯಲ್ಲಿ ಇದ್ದ ಕಟ್ಟಡಗಳನ್ನು ನೆಲಸಮ ಮಾಡಿ ಪ್ರತಿವಾದಿಯರಿಗೆ ಸ್ವಾಧೀನ ಕೊಟ್ಟಿರುತ್ತಾರೆ ಅಂತಾ ವಾದಿ ಸ್ವತಃ ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ ಎಂದರೆ ಸರಿ. ವಾದಿಗೆ ಅನುಕೂಲ ಮಾಡಿಕೊಡುವ ಉದ್ದೇಶ ದಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮಯ್ಯನಿಗೆ ಒಂದು ಎಕರೆ ಮಾರಾಟ ಮಾಡಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಗೊತ್ತಿಲ್ಲಾ. ನಾನು ಲಕ್ಷ್ಮಯ್ಯನಿಂದ ಆಸ್ತಿ ಖರೀದಿಸಿದ ಬಗ್ಗೆ ಯಾವುದೇ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿ ನಾನು ಖರೀದಿಸಿದ್ದೇನೆ ಅಂತಾ ಪ್ರತಿವಾದಿಯರ ವಿರುದ್ದ ನಾನು ಯಾವುದೇ ದಾವೆ ಸಲ್ಲಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿಯನ್ನು ಕಬಳಿಸುವ ಉದ್ದೇಶ ದಿಂದ ವಾದಿಯೊಂದಿಗೆ ಮಿಲಾಪೆ ಆಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.